ಬೇಲೂರು ರಾಮಮೂರ್ತಿ



ಗಡಿಯಾರದಲ್ಲಿ ಸಂಜೆ ಐದು ಗಂಟೆಯಾಗುತ್ತಿದ್ದಂತೆ ನಿರ್ಮಲ ಒಳಗೆಲ್ಲೋ ಇದ್ದ ತಂದೆಯ ಹತ್ತಿರ ಬಂದು "ಏನು ಇವತ್ತು ರೈಲ್ವೇ ಸ್ಟೇಷನ್‌ಗೆ ಹೋಗಲ್ವಾ" ಅಂತ ಕೇಳಿದಳು. ಗುರಪ್ಪನವರು ಯಾಕೋ ಇವತ್ತು ಮರೆತೇ ಬಿಟ್ಟೆನಲ್ಲ ಅಂತ ಆತುರಾತುರದಿಂದ "ನಡಿಯಮ್ಮ" ಅಂತ ಕಾರು ಹತ್ತಿ ಕೂತರು. ಹತ್ತು ನಿಮಿಷದ ಡ್ರೈವ್. ಕಾರು ನಿಲ್ಲಿಸಿ ಸ್ಟೇಷನ್ ಒಳಗೆ ಹೋಗುವಾಗ ಸ್ಟೇಷನ್ ಮಾಸ್ಟರು ನಗುತ್ತಾ "ಇವತ್ತೂ ಒಂದು ಪಕ್ಷ ರೈಲು ಬರದೇ ಹೋಗಬಹುದೇನೋ. ಆದರೆ ನೀವು ಮಾತ್ರ ಬರೋದು ತಪ್ಪೋಲ್ಲ" ಅಂದು ನಕ್ಕರು. ಗುರಪ್ಪ ಫ್ಲಾಟ್‌ಫಾರಂ ಬಳಿ ಬಂದು ಬೆಂಚಿನ ಮೇಲೆ ಕೂತರು. ನಿರ್ಮಲ ತಂದೆಯ ಮುಖವನ್ನೇ ನೋಡುತ್ತಾ ಕೂತಿದ್ದಳು. ರೈಲು ಬರುವ ದಿಕ್ಕಿಗೆ ಮುಖ ಮಾಡಿ ಕೂತಿದ್ದ ಗುರಪ್ಪ ಮಗಳ ಮುಖ ನೋಡಿ ನಕ್ಕು ನೋಡು "ರೈಲು ಸರಿಯಾದ ಸಮಯಕ್ಕೆ ಬರ್ತಿದೆ" ಅಂದರು. ರೈಲು ಬಂತು. ಸುಮಾರು ಏಳೆಂಟು ಬೋಗಿಗಳು. ಎಲ್ಲದರಿಂದಲೂ ಕೆಲವರು ಇಳಿದರು, ಕೆಲವರು ಹತ್ತಿದರು. ರೈಲು ಹೊರಟಿತು. ಎಲ್ಲರೂ ಅವರವರ ಪಾಡಿಗೆ ಮನೆ ಕಡೆ ಹೊರಟಾಗ ಅಲ್ಲಿ ಉಳಿದದ್ದು ಗುರಪ್ಪ ಅವರ ಮಗಳು ನಿರ್ಮಲ ಇಬ್ಬರೇ."ಇವತ್ತೂ ನೀನು ನಿರೀಕ್ಷಿಸಿದವರು ಬರಲಿಲ್ಲ, ಮನೆಗೆ ಹೋಗೋಣ್ವಾ" ಅಂತ ನಿರ್ಮಲ ಕೇಳಿದಾಗ ಮಗಳ ತಲೆ ಸವರಿ "ನಡಿ ಮಗಳೇ, ಎಲ್ಲದಕ್ಕೂ ಆ ಭಗವಂತ ಮನಸ್ಸು